ಸಾಲಿಡ್ ವೇಸ್ಟನ್ನು ಗೋವಾದ ಮಂಡಳಿಯವರು ತೆಗೆಸಿರುತ್ತಾರೆ. ಇನ್ನು ಮುಂದೆ ಈ ತರಹದ ಘಟನೆಯಾದ ಸಂಬಂಧಿಸಿದವರ ವಿರುದ್ಧ ಕ್ರಿಮಿನಲ್ ಮೊಕದ್ದಮೆಯನ್ನು ಸಲ್ಲಿಸಲಾಗುವುದೆಂದು ಗೋವಾ ಸರ್ಕಾರದ ಮಾಲಿನ್ಯ ನಿಯಂತ್ರಣ ಮಂಡಳಿಗೆ ಸೂಚಿಸಲಾಗಿದೆ. ಈಗಾಗಲೇ ಅದನ್ನು ವಾಪಸ್ ಅವರು ತೆಗೆಸಿದ್ದಾರೆ.

ಅಧ್ಯಕ್ಷರು : ಆಯಿತು. ಈಗ ಗೋಮಾಳದ ವಿಚಾರದಲ್ಲಿ ತೆಗೆದುಕೊಳ್ಳುತ್ತಿದ್ದೇನೆ ಬಹಳ ಮುಖ್ಯವಾದುದು. ರೈತರಿಗೆ ಎಲ್ಲಾ ಕಡೆ ಆ ಸಮಸ್ಯೆ ಕಾಡುತ್ತಿದೆ.

11. ಗಮನ ಸೆಳೆಯುವ ಸೂಚನೆ.

(ಅ) ಗೋಮಾಳ ಜಾಗವನ್ನು ಸರ್ಕಾರದ ವಿವಿಧ ಯೋಜನೆಗಳಿಗೆ ಮಂಜೂರು ಮಾಡುವ ಬಗ್ಗೆ.

ಶ್ರೀ ಹೆಚ್.ಸಿ. ಬಾಲಕೃಷ್ಣ (ಮಾಗಡಿ) : ಮಾನ್ಯ ಅಧ್ಯಕ್ಷರೇ, ಈಗಾಗಲೇ ನಾನು ಸರ್ಕಾರದ ಗಮನವನ್ನು ಸೆಳೆದಿದ್ದೇನೆ. ಈ ಗೋಮಾಳವನ್ನು ಕೊಡಬಾರದೆಂದು ನಮ್ಮ ಹೈಕೋರ್ಟ್ ಒಂದು ಆದೇಶವನ್ನು ಹೊರಡಿಸಿದೆ. ಆದರೆ ಈ ಆದೇಶದಿಂದ ಅನೇಕ ಜನ ರೈತರು ಏನು ಗೋಮಾಳವನ್ನು ಉತ್ತು ಕೊಂಡಿದ್ದಾರೆ. ಅವರಿಗೆ ಬಹಳ ತೊಂದರೆಯಾಗುತ್ತದೆ. ಇದರ ಬಗ್ಗೆ ಸರ್ಕಾರ ಸರಿಯಾದ ಸ್ಪಷ್ಟೀಕರಣವನ್ನು ಕೊಡಬೇಕು. ಅದಲ್ಲದೆ ಇನ್ನೊಂದು ಸಮಸ್ಯೆ ಆಗಿದೆ, ಈಗಾಗಲೇ ಮಂಜೂರಾಗಿರುವವರಿಗೂ ಕೂಡ ಹಕ್ಕುಪತ್ರಗಳನ್ನು ಕೊಡುತ್ತಿಲ್ಲ. ಅದರ ಬಗ್ಗೆ ಸ್ಪಷ್ಟೀಕರಣವನ್ನು ಕೊಡಬೇಕು. ಅವರಿಗೆ ಈಗಾಗಲೇ ಮಂಜೂರಾಗಿದೆ. ಹಿಂದೆ ಕಮಿಟಿಗಳಲ್ಲಿ ಮಂಜೂರಾಗಿದೆ. ಅದನ್ನು ಯಾವ ರೀತಿ ಮಾಡಬೇಕು? ಸರ್ಕಾರಕ್ಕೆ ಯಾವುದಾದರೂ ಕಾರಣಕ್ಕೆ ಜಾಗ ಬೇಕಾಗಿದ್ದರೆ ಅದನ್ನು ಕೂಡ ಕೊಡುವುದಕ್ಕೆ ಆಗುತ್ತಿಲ್ಲ. ಆ ದೃಷ್ಟಿಯಿಂದ ದಯಮಾಡಿ ಇದರ ಬಗ್ಗೆ ಸರಿಯಾದ ಸ್ಪಷ್ಟೀಕರಣವನ್ನು ಕೊಡಬೇಕೆಂದು ಸರ್ಕಾರವನ್ನು ಕೇಳುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಎಂ.ಪಿ. ವೆಂಕಟೇಶ್ (ಹೆಗ್ಗಡದೇವನಕೋಟೆ) : ಮಾನ್ಯ ಅಧ್ಯಕ್ಷರೇ, ಮಾನ್ಯ ಜೆ.ಹೆಚ್.ಪಟೇಲ್ ರವರ ಕಾಲದಲ್ಲಿ ರೈತರಿಗೆ ಅನುಕೂಲವಾಗುತ್ತೆ, ಅದನ್ನು ಕೊಡಬೇಕೆಂದು ಹೇಳಿ ಅವತ್ತು ಸರ್ಕಾರ ಒಂದು ಜಿ.ಓ.ವನ್ನು ಮಾಡಿ ಗೋಮಾಳ ಜಮೀನನ್ನು ಕೊಡುವುದಕ್ಕೆ ತೀರ್ಮಾನವನ್ನು ಮಾಡಿದರು. ಈಗ ಕರ್ನಾಟಕ ರಾಜ್ಯದ ಉಚ್ಚ ನ್ಯಾಯಾಲಯದವರು ಇದನ್ನು ಕೊಡುವುದಕ್ಕೆ ಆಗುವುದಿಲ್ಲವೆಂದು ಹೇಳಿದರೆ 224 ಕ್ಷೇತ್ರದಲ್ಲಿಯೂ ಬಹಳ ಜನರಿಗೆ ತೊಂದರೆಯಾಗುತ್ತದೆ. ಸುಮಾರು 10–15 ವರ್ಷಗಳಿಂದಲೂ ಈ ಜಮೀನನ್ನು ಮಾಡಿಕೊಂಡಿದ್ದಾರೆ. ಇದರಿಂದ ರೈತರಿಗೆ ಬಹಳ ಅನ್ಯಾಯವಾಗುತ್ತದೆ. ಈ ಬಗ್ಗೆ ರೈತರಿಗೆ ಅನುಕೂಲ ಮಾಡಿಕೊಡಬೇಕೆಂದು ಕೇಳುತ್ತೇನೆ.

ಶ್ರೀ ಜಿ.ಟಿ. ದೇವೇಗೌಡ (ಹುಣಸೂರು) : ಮಾನ್ಯ ಅಧ್ಯಕ್ಷರೇ, ಗೋಮಾಳ ಜಮೀನನ್ನು ಹಂಚಬಾರದೆಂದು ಹೇಳಿ ನ್ಯಾಯಾಲಯವೇನು ತೀರ್ಪನ್ನು ಕೊಟ್ಟಿದ್ದಾರೆ, ಅದು ಸ್ವಾಗತಾರ್ಹವಾದಂಥ ಕ್ರಮ. ನಾವು ಹೇಳುವುದಿಷ್ಟೆ, ಎಲ್ಲಿ ಗೋಮಾಳ ಖಾಲಿ

ಇದೆ, ಅಲ್ಲಿ ಅದನ್ನು ನೀವು ಸುರಕ್ಷಿತವಾಗಿ ರಕ್ಷಣೆ ಮಾಡಿ. ಆದರೆ 20–25 ವರ್ಷಗಳಿಂದ ಬಡವರು ಆ ಜಮೀನನ್ನೇ ನಂಬಿಕೊಂಡು ಜೀವನ ಮಾಡಿಕೊಂಡು ಬಂದಿರತಕ್ಕ ಕುಟುಂಬಗಳನ್ನು ತೆರವು ಮಾಡಿ ಎಂದು ಹೇಳಿ ನ್ಯಾಯಾಲಯ ಹೇಳಿಲ್ಲ. ರೈತರನ್ನು ತೆರವು ಮಾಡಿಸಬೇಕೆಂದು ಹೇಳಿಲ್ಲ. ನಾವು ಹೇಳುವುದು ಸರ್ಕಾರಿ ಗೋಮಾಳ ಜಮೀನು ಎಲ್ಲಿದೆ, ಅದನ್ನು ರಕ್ಷಣೆ ಮಾಡಬೇಕೆಂದು ಹೇಳಿ ನ್ಯಾಯಾಲಯವೇನು ತೀರ್ಪನ್ನು ಕೊಟ್ಟಿದೆ, ಆದರೆ ಸುಮಾರು 25–30 ವರ್ಷಗಳಿಂದ ಅಕ್ರಮವಾದ ಜಮೀನನ್ನು ಸಕ್ರಮ ಮಾಡಬೇಕೆಂದು ಹೇಲಿ ಹಲವಾರು ಕಮಿಟಿಗಳಾಗಿವೆ. ಆದರೂ ಆಗಿಲ್ಲ. ಆ ಲೋಪ ನಮ್ಮದೇ. ರಾಜಕಾರಣಿಗಳದೇ ಲೋಪ. ಏಕೆಂದರೆ ಇದುವರೆಗೂ ನಾವು ಅವುಗಳನ್ನು ಸಕ್ರಮ ಮಾಡಿ ಅವರಿಗೆ ಸಾಗುವಳಿ ಚೀಟಿಗಳನ್ನು ಕೊಡಲಿಕ್ಕೆ ಆಗಲಿಲ್ಲ. ಕಳೆದ ಬಾರಿ 18 ತಿಂಗಳಿಂದ ಒಂದು ಸಮಿತಿ ಕೂಡ ರಚನೆಯಾಗಲಿಲ್ಲ. ಕೋರ್ಟ್ ಆದೇಶ ಈಗತಾನೇ ಬಂದಿದೆ. ನಾನು ಹೇಳುವುದು ಇದಕ್ಕೆ ಒಂದು ಸಮಯ ನಿಗದಿ ಮಾಡಿ. 10 ವರ್ಷದಿಂದ ಹಿಂದೆ ಯಾರು ಅನುಭವ ಮಾಡಿಕೊಂಡು ಬರುತ್ತಿದ್ದಾರೆ, ಅವರಿಗೆ ಕೂಡಲೇ ಸಾಗುವಳಿ ಚೀಟಿಯನ್ನು ವಿತರಣೆ ಮಾಡಲೇಬೇಕು. ಅವರಿಗೆ ಸಕ್ರಮ ಮಾಡಲೇಬೇಕು. ಇಂತಿಷ್ಟು ದಿನಗಳೊಳಗೆ ತಾವು ಸಾಗುವಳಿ ಚೀಟಿಯನ್ನು ಕೊಡುತ್ತೇವೆಂದು ಹೇಲಿ ನೀವು ಕೋರ್ಟಿಗೆ ಅಪೀಲು ಹೋಗಲೇಬೇಕು. ಈ ಬಡ ರೈತರು ಏನು ಅನ್ಯಾಯಕ್ಕೆ ಒಳಗಾಗಿದ್ದಾರೆ, ಅವರಿಗೆ ಜೀವನಕ್ಕೆ ಗತಿಯೇ ಇಲ್ಲ. ನಗರ ಪ್ರದೇಶದಿಂದ ಎಂಟು ಕಿಲೋಮೀಟರ್ ಕೊಡಬಾರದೆನ್ನುವ ಆದೇಶವನ್ನು ಕೂಡ ನೀವು ಇಟ್ಟುಕೊಂಡಿದ್ದೀರಿ. ಅದನ್ನು ಈಗ ನಾವು ಕೇಳುವುದಕ್ಕೆ ಬರುತ್ತಿಲ್ಲ. ಅಲ್ಲಿ ಹಳ್ಳಿಗಳಲ್ಲಿ 4 ಎಕರೆ, 2 ಎಕರೆ, 3 ಎಕರೆ, 1 ಎಕರೆಯನ್ನು ಬಡವರು ಅದನ್ನೇ ಉತ್ತು ಅದರಿಂದಲೇ ಜೀವನ ಮಾಡಿ ಅದರಿಂದಲೇ ಊಟ ಮಾಡುವ ಬಡವರ ಹೊಟ್ಟೆಯ ಮೇಲೆ ಹೊಡೆದಂತಾಗುತ್ತದೆ. ಅದರ ಶಾಪ ತಟ್ಟುತ್ತದೆ. ಅದರಿಂದ ಸರ್ಕಾರ ಇದಕ್ಕೆ ಕೂಡಲೇ ತಿದ್ದುಪಡಿಯನ್ನು ಮಾಡಿ ಸೂಕ್ತವಾದ ಅಮೆಂಡ್‌ಮೆಂಟ್ ಅನ್ನು ತಂದು ಈ ಬಡ ರೈತರು ಇವತ್ತೇನು ಜೀವನವನ್ನು ಮಾಡುತ್ತಿದ್ದಾರೆ. ಅವರಿಗೆ ಸಾಗುವಳಿ ಚೀಟಿಯನ್ನು ವಿತರಣೆ ಮಾಡಿ ರಕ್ಷಣೆ ಮಾಡಲಿಕ್ಕೆ ಸರ್ಕಾರ ಕೂಡಲೇ ಕ್ರಮಕೈಗೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೇ, ಹೈಕೋರ್ಟ್ ಆದೇಶ ಗೋಮಾಳವನ್ನು ಕೊಡಬೇಡಿ ಎಂದು ಹೇಳಿದೆ. ಗ್ರಾಮದ ಪಕ್ಕ ಸೈಟು ಆಗತಕ್ಕ ಜಾಗಕ್ಕೆ ತಾವೊಂದು ಅಪೀಲು ಮಾಡಬೇಕಾಗಿತ್ತು. ಕನಿಷ್ಟ ಸೈಟುಗಳಿಗಾದರೂ ಏಲೆ ಮಾಡುವಷ್ಟು ಗೋಮಾಳವನ್ನು ಬಿಡಿಸಿಕೊಳ್ಳುವುದಕ್ಕೆ ಸರ್ಕಾರ ಒಂದು ಪ್ರಯತ್ನವನ್ನು ಮಾಡಬೇಕಾಗಿತ್ತು. ಎರಡನೆಯದು, ಮೊದಲೇ ಬಗರ್‌ಹುಕುಂ ಕಮಿಟಿಗಳಲ್ಲಿ ಏನಾಗಿತ್ತು. ಗೋಮಾಳಗಳನ್ನು ಏಲೆ ಮಾಡಿಬಿಟ್ಟಿದ್ದೆವು. ಅದರ ಪರಿಸ್ಥಿತಿಯೇನು ಎಂದು ಸರ್ಕಾರ ಈಗ ಹೇಳಿಲ್ಲ. ಹೈಕೋರ್ಟು ಡಿಸಿಷನ್ ಆಗುವುದಕ್ಕೆ ಮೊದಲೇ ಗೋಮಾಳ ಕೊಟ್ಟು ಕೆಲವು ಕಡೆ ಹಣವನ್ನು ಕಟ್ಟಿಸಿಕೊಂಡು ಸಾಗುವಳಿ ಚೀಟಿ ಕೊಡುವ ಕಾರ್ಯ ವಿಳಂಬವಾಗಿರುವುದರಿಂದ

ಅದನ್ನು ಕೂಡ ಈಗ ತಹಶೀಲ್ದಾರ್‌ಗಳು "ಇಲ್ಲ, ಇಲ್ಲ, ನಾವು ಡಿಸಿಗಳನ್ನು ಕೇಳಬೇಕಾಗಿದೆ. ಅವರ ಸಮ್ಮತಿ ತೆಗೆದುಕೊಂಡು ಕೊಡಬೇಕಾಗಿದೆ", ಎಂದು ಹೇಳಿ ಇವತ್ತು ಪೆಂಡಿಂಗ್ ಇಟ್ಟುಬಿಟ್ಟಿದ್ದಾರೆ. ಅದನ್ನು ತಾವು ಒಂದು ನಿರ್ಣಯವನ್ನು ತೆಗೆದುಕೊಳ್ಳಬೇಕು. ಪ್ರೈಯರ್ ಟು ದಿ ಡಿಸಿಷನ್ ಆಗಿರುವ ತೀರ್ಮಾನಕ್ಕೆ ನೀವು ಏನು ಹೇಳುತ್ತೀರಿ? ಅವತ್ತು ಯಾರು ದುಡ್ಡು ಕಟ್ಟಿ ತೆಗೆದುಕೊಂಡವರು ತೆಗೆದುಕೊಂಡು ಬಿಟ್ಟಿದ್ದಾರೆ. ಆಕಸ್ಮಾತ್ ಯಾರು ಹಣವನ್ನು ಕಟ್ಟಲಿಲ್ಲ, ಅವರಿಗೆ ಅಡಚಣೆಯಾಗಿದೆ. ಮೂರನೆಯದು, ಗೋಮಾಳದ ಬದಲು ಇನ್ಯಾವುದಾದರೂ ಜಾಗವನ್ನು ನೀವು ಸಬ್‌ಸ್ಟಿಟ್ಯೂಟ್ ಮಾಡಿ ಕೊಡುತ್ತೇವೆಂದರೆ ಹೈಕೋರ್ಟು ತಕರಾರು ಮಾಡಲಾರದು. ಇಲ್ಲ ಅದರ ಬದಲು ಇಂಥ ರೆವಿನ್ಯೂ ಲ್ಯಾಂಡ್ ಇದೆ, ಸಿ ಅಂಡ್ ಡಿ ಲ್ಯಾಂಡ್ ನಮಗೆ ಇದೆ. ಇದನ್ನು ನಾವು ಗೋಮಾಳಕ್ಕಾಗಿ ವಿನಿಯೋಗಿಸಿಕೊಳ್ಳುತ್ತೇವೆ ಎಂದು ತಾವು ಹೇಳಬಹುದು. ಹಾಗಾದಾಗ ಈ ಮೈನ್ಸ್‌ಗಳನ್ನು ಅನಧಿಕೃತವಾಗಿ ಮಾಡುವುದು ತಪ್ಪುತ್ತದೆ. ಆಲ್‌ಟರ್‌ನೇಟ್ ಲ್ಯಾಂಡ್ ಏನಾದರೂ ಸಜೆಸ್ಟ್ ಮಾಡಿ ಗ್ರಾಮದ ಪಕ್ಕ ಸೈಟ್ ಮಾಡಲಿಕ್ಕೇನಾದರೂ ಒಂದು ಸಣ್ಣ ಅವಕಾಶ ಮಾಡಲಿಕ್ಕೆ ಒಂದು ಅಪೀಲು ಹೈಕೋರ್ಟಿಗೆ ಹಾಕುವುದಕ್ಕಾಗುತ್ತದೆಯೇ ಎಂಬುದನ್ನು ತಾವು ಹೇಳಬೇಕು.

ಶ್ರೀ ಜಿ. ಚಂದ್ರಣ್ಣ : ಮಾನ್ಯ ಅಧ್ಯಕ್ಷರೇ, ಈ ಘಾರಂ ನಂ. 50, 53 ಎರಡೂ ಪ್ರಚುರ ಪಡಿಸಿ ಅದು ಮುಗಿದುಹೋಗಿದೆ. ಮತ್ತೊಂದು ಅವಕಾಶವನ್ನು ಕೊಡಬೇಕೆಂದು ಎಲ್ಲಾ ಕಡೆ ಬಹಳ ಒತ್ತಾಯ ಇದೆ. ಅದಕ್ಕೆ ಒಂದು ತೀರ್ಮಾನವನ್ನು ಸರ್ಕಾರ ತೆಗೆದುಕೊಳ್ಳಬೇಕು. ಏನಾಗುತ್ತದೆ, ಈಗಾಗಲೇ ಕೋರ್ಟ್‌ನವರು ಹೇಳಿಬಿಟ್ಟಿದ್ದಾರೆ. ಈಗಾಗಲೇ ಮಂಜೂರಾತಿ ಮಾಡಿದ್ದಾರೆ, ಹಕ್ಕುಪತ್ರಗಳನ್ನು ಒಂದು ಕಡೆ ಇಟ್ಟುಕೊಂಡಿದ್ದಾರೆ. ಅಲ್ಲಿಗೂ ಒಂದೊಂದೇ ಹಿಂದಿನ ಡೇಟ್ ಹಾಕಿ ಕೊಡುತ್ತಿರುವುದೂ ಸಹಾ ನಮ್ಮ ಗಮನಕ್ಕೆ ಬಂದಿದೆ. ಅದಕ್ಕೆ ಸ್ಪಷ್ಟವಾದ ನಿಲುವನ್ನು ಸರ್ಕಾರ ತೆಗೆದುಕೊಳ್ಳಬೇಕು. ಆ ರೀತಿ ಆಗದೇ ಹೋದರೆ ಇನ್ನೂ ಅನೇಕ ಜನರಿಗೆ ಗೊತ್ತೇ ಇರುವುದಿಲ್ಲ. ಬಹಳಷ್ಟು ಜನಕ್ಕೆ ಒತ್ತಾಯ ಮಾಡಿ ಹೇಳಿದರೂ ಸಹಿತ ಅವರು ಹಾಕಿಕೊಳ್ಳುವುದಿಲ್ಲ. ಹಾಗಾಗಿ ಒಂದು ಸ್ಪಷ್ಟವಾದ ತೀರ್ಮಾನವನ್ನು ತೆಗೆದುಕೊಳ್ಳಬೇಕು. ಆಮೇಲೆ ನಗರ ಪ್ರದೇಶ ವ್ಯಾಪ್ತಿ ವಿಸ್ತರಣೆ ಮಾಡುವುದು ಇದೆಯಲ್ಲ, ನಗರವೆಂದರೆ ಯಾವ ನಗರಗಳು? ಇವತ್ತು ಬೆಂಗಳೂರು, ಮೈಸೂರು ಅಥವಾ ಹುಬ್ಬಳ್ಳಿ, ಧಾರವಾಡ, ಆ ರೀತಿಯಲ್ಲಿ ಅದಕ್ಕೊಂದು ಮಾನ ದಂಡವನ್ನು ಉಪಯೋಗಿಸಲಿ. ಈ ದೇವನಹಳ್ಳಿ, ವಿಜಿಪುರ, ದೊಡ್ಡಬಳ್ಳಾಪುರ, ಹೊಸಕೋಟೆ, ರಾಮನಗರ, ಇಂಥ ಗ್ರಾಮಗಳಿಗೂ ಸಹಾ ವಿಸ್ತರಣೆ ಮಾಡಿದರೆ ಅಲ್ಲಿರುವ ಪ್ರದೇಶಗಳು ಎಂಟು ಕಿಲೋಮೀಟರ್ ಎಂದು ಸೇರಿಸಿದರೆ ಅದು ಎಷ್ಟು ಕಷ್ಟವಾಗಬಹುದು ಎನ್ನುವುದನ್ನೂ ಸಹಿತ, ಅದರ ಬಗ್ಗೆ ಸ್ಪಷ್ಟೀಕರಣ, ಕೊಡಬೇಕು. ಈ ರೀತಿ ತಾರತಮ್ಯವನ್ನು ಹೋಗಲಾಡಿಸುವಂಥ ಒಂದು ವ್ಯವಸ್ಥೆ ಬಗ್ಗೆ ಹೇಳಿ ಅದರ ಬಗ್ಗೆ ಈ ಸರ್ಕಾರ ಗಮನವನ್ನು ಹರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಡಾ. ಕೆ. ಅನ್ನದಾನಿ (ಮಳವಳ್ಳಿ) : ಮಾನ್ಯ ಅಧ್ಯಕ್ಷರೆ, ಈ ಗೋಮಾಳ ವಿಚಾರಕ್ಕೆ ಸಂಬಂಧಪಟ್ಟಂತೆ ಇವತ್ತು ಗ್ರಾಮೀಣ ಪ್ರದೇಶದಲ್ಲಿ ಬಹಳಷ್ಟು ರೈತರಿಗೆ ಅನ್ಯಾಯವಾಗುತ್ತಿದೆ ಎಂಬ ದೃಷ್ಟಿ ಒಂದು ಕಡೆಯಾದರೆ, ಇನ್ನೊಂದು ಕಡೆ ಗ್ರಾಮೀಣ ಪ್ರದೇಶಗಳಲ್ಲಿ ಹಳ್ಳೀಗಳ ಕಡೆಗಳಲ್ಲಿ ಜನಸಂಖ್ಯೆಗೆ ಅನುಗುಣವಾಗಿ ಇವತ್ತು ನಾವು ನಿವೇಶನಗಳನ್ನು ಕೊಡಬೇಕಾಗುತ್ತದೆ. ಬಹಳ ವರ್ಷಗಳ ಹಿಂದೆ 100–200 ವರ್ಷಗಳ ಹಿಂದೆ ಇದ್ದಂತಹ ಗ್ರಾಮಠಾಣಾಗಳ ಇನ್ನು ಹೆಚ್ಚು ಜನಸಂಖ್ಯೆಗೆ ಆಧಾರವಾಗಿ ನಾವು ನಿವೇಶನಗಳನ್ನು ಹಂಚಬೇಕಾದರೂ ಕೂಡ ಹಂಚುವುದಕ್ಕೆ ಸಾಧ್ಯವಾಗಲಿಲ್ಲ. ಅದಕ್ಕೆ ನಿವೇಶನಗಳ ಕೊರತೆ ಇದೆ. ಆ ನಿವೇಶನಗಳ ಕೊರತೆಯನ್ನು ಸರ್ಕಾರ ಅವರಿಗೆ ಬೇರೆ ಕಡೆಯಲ್ಲಾದರೂ ಪರ್ಚೆಸ್ ಮಾಡಿ ಕೊಡಬೇಕಾಗುತ್ತದೆ. ಬೇರೆ ಕಡೆ ಪರ್ಚೆಸ್ ಮಾಡಿ ಕೊಡುವುದಕ್ಕೆ ಆಗಲಿಲ್ಲವೆಂದರೆ ಗ್ರಾಮೀಣ ಪ್ರದೇಶದ ಜನರು ಅವರ ಊರಿನ ಪಕ್ಕದಲ್ಲಿ ಗೋಮಾಳ ಇದ್ದರೆ ಅಲ್ಲಿ ಮನೆಯನ್ನು ಕಟ್ಟಿಕೊಳ್ಳುವಂತಹ ವ್ಯವಸ್ಥೆಯನ್ನು ಅವರು ಮಾಡಿಕೊಳ್ಳುತ್ತಾರೆ. ಆಗ ಅಕ್ರಮ ಸಕ್ರಮವನ್ನಾದರೂ ಕೂಡ ಮಾಡಬೇಕಾಗುತ್ತದೆ. ರೆವಿನ್ಯೂ ಲ್ಯಾಂಡ್‌ನಲ್ಲೋ ಅಥವಾ ಗೋಮಾಳದಲ್ಲೋ ಅವರು ಮನೆಯನ್ನು ಕಟ್ಟಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಾರೆ. ಇವತ್ತು ಗುಡಿಸಲು ಹಾಕಿಕೊಂಡಿರುವಂತಹ ಗ್ರಾಮೀಣ ಪ್ರದೇಶದಲ್ಲಿ ಒಬ್ಬ ಬಡವ ಇವತ್ತು ಆಶ್ರಮ ಮನೆಯನ್ನು ತೆಗೆದುಕೊಳ್ಳಬೇಕಾದರೆ ಇವತ್ತು ಸೈಟ್ ರಿಜಿಸ್ಟ್ರೇಷನ್ ಆಗಿರಬೇಕು. ಸೈಟ್ ರಿಜಿಸ್ಟ್ರೇಷನ್ ಆಗಿಲ್ಲವೆಂದರೆ ಅವನಿಗೆ ಯಾವುದೇ ರೀತಿಯಲ್ಲಿ ಆಶ್ರಯದಲ್ಲಿ ಅವನಿಗೆ ಮನೆಯನ್ನು ಕೊಡುವಂತಹ ವ್ಯವಸ್ಥೆಯಾಗುವುದಿಲ್ಲ. ಅದರಿಂದ ಗೋಮಾಳವನ್ನು ಇವತ್ತು ಗ್ರಾಮ ಠಾಣಾ ವ್ಯಾಪ್ತಿಯಲ್ಲಿ ಏನು ಸಮಸ್ಯೆ ಇದೆ. ಕೊನೆಯ ಪಕ್ಷ ನಿವೇಶನಗಳನ್ನು ಮಾಡಲಿಕ್ಕಾದರೂ ಕೂಡ ಇವತ್ತು ಗೋಮಾಳಗಳನ್ನು ಕೊಡತಕ್ಕಂಥಹದ್ದು ಮತ್ತು ರೈತರು ಏನು ಹಿಂದಿನಿಂದ ಉಳುಮೆ ಮಾಡಿಕೊಂಡು ಬರುತ್ತಿದ್ದಾರೆ. ಅವರಿಗಾದರೂ ಕೊಡತಕ್ಕಂತಹ ವ್ಯವಸ್ಥೆಯನ್ನು ಮಾಡಲಿಲ್ಲವೆಂದರೆ ಮುಂದಿನ ದಿನಗಳಲ್ಲಿ ರೈತರು ಮತ್ತು ಗ್ರಾಮೀಣ ಪ್ರದೇಶದ ಬಡವರು ಇಕ್ಕಟ್ಟಿಗೆ ಸಿಕ್ಕಿಹಾಕಿಕೊಂಡು ಅವರ ಜೀವನವನ್ನು ನಡೆಸುವುದಕ್ಕೆ ಬಹಳ ತೊಂದರೆಯಾಗುತ್ತದೆ. ಇದಕ್ಕೆ ಅವಕಾಶ ಮಾಡಿಕೊಡಬೇಕೆಂದು ತಮ್ಮಲ್ಲಿ ಮನವಿ ಮಾಡುತ್ತೇನೆ.

ಶ್ರೀ ಹೆಚ್. ನಿಂಗಪ್ಪ : ಮಾನ್ಯ ಅಧ್ಯಕ್ಷರೆ, ನಮ್ಮ ಗೌರವಾನ್ವಿತದ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಪಿಟಿಷನ್ 14048:2005 ದಿನಾಂಕ: 22–9–2005ರಲ್ಲಿ ಒಂದು ತೀರ್ಪನ್ನು ಕೊಟ್ಟಿದ್ದಾರೆ. ಈ ತೀರ್ಪಿನ ಅನ್ವಯ ಯಾವುದೇ ಗೋಮಾಳ ಗಾಯರಾಣಾ ಉಳ್ಬಣಿ ಈ ಜಮೀನನ್ನು ಯಾವುದೇ ಒಬ್ಬ ವ್ಯಕ್ತಿ ಅಥವಾ ಸಂಸ್ಥೆಗೆ ಮಂಜೂರು ಮಾಡುವುದಕ್ಕೆ ನಿಯಮಗಳಲ್ಲಿ ಅವಕಾಶವಿಲ್ಲ. ಇದರ ಜೊತೆಗೆ ಜಮೀನು ಬಹಳ ಕಡಿಮೆ ಪ್ರಮಾಣದಲ್ಲಿರುವುದರಿಂದ ಈ ತೀರ್ಪಿನ ವಿರುದ್ಧವಾಗಿ ಯಾವುದೇ ಒಂದು ಮೇಲ್ಮನವಿಯನ್ನು ಸಲ್ಲಿಸುವುದಕ್ಕೆ ಅವಕಾಶವಿಲ್ಲ ಎನ್ನುವುದನ್ನು ಇವತ್ತು ಸರ್ಕಾರದ

ವತಿಯಿಂದ ಬಂದಿರುವಂತಹ ಈ ಉತ್ತರದಲ್ಲಿ ಹೇಳಿದ್ದಾರೆ. ಈಗಾಗಲೇ ಸಾಕಷ್ಟು ಜನರು ಈ ಗೋಮಾಳದ ಜಮೀನನ್ನು ಬಗರ್‌ಹುಕುಂ ಸಾಗುವಳಿ ಮಾಡಿ ಇವತ್ತು ಅನುಭವಿಸುತ್ತಿದ್ದಾರೆ. ಸುಮಾರು 25–30 ವರ್ಷಗಳಿಂದಲೂ ಉಳುಮೆ ಮಾಡಿಕೊಂಡು ಬರುವಂತಹವರು ಇದ್ದಾರೆ. ಆ ಬಂಜರು ಬಿದ್ದಿರುವಂತಹ ಜಮೀನನ್ನು ಸಾಗುವಳಿ ಮಾಡಿ, ಅದಕ್ಕೆ ಬೇಕಾದಷ್ಟು ಹಣವನ್ನು ಖರ್ಚು ಮಾಡಿ, ಇವತ್ತಿನ ದಿವಸ ಅದರಲ್ಲಿಯೇ ಜೀವನ ಮಾಡುವಂತಹ ಕುಟುಂಬಗಳು ನಮ್ಮ ರಾಜ್ಯದಲ್ಲಿವೆ. ಅದಕ್ಕೋಸ್ಕರವಾಗಿ ಅವರಿಗೆ ಒಂದು ನೆಲೆಯನ್ನು ಕಲ್ಪಿಸಬೇಕಾದರೆ ಮತ್ತೇ ಅವರ ಜೀವನಕ್ಕೆ ಒಂದು ಮಾರ್ಗವನ್ನು ಕಲ್ಪಿಸಬೇಕಾದರೆ ಇವತ್ತು ಅವರು ಏನು ಅಕ್ರಮವಾಗಿ ಸಾಗುವಳಿಯನ್ನು ಮಾಡಿಕೊಂಡು ಬರುತ್ತಿದ್ದಾರೆ ಅದನ್ನು ಸಕ್ರಮಗೊಳಿಸುವಂತಹ ಅವಶ್ಯಕತೆ ಇರುವುದರಿಂದ, ಮತ್ತೇ ಈಗಿರುವಂತಹ ಹೈಕೋರ್ಟಿನ ತೀರ್ಪಿನ ಅನ್ವಯ ಇವತ್ತು ಗೋಮಾಳದ ಜಮೀನನ್ನು ಮಂಜೂರು ಮಾಡುವುದಕ್ಕೆ ಅವಕಾಶವಿಲ್ಲದಿರುವುದರಿಂದ, ಈ ತೀರ್ಪಿನ ವಿರುದ್ಧವಾಗಿ ಒಂದು ಮೇಲ್ಮನವಿಯನ್ನು ಸಲ್ಲಿಸತಕ್ಕಂತಹ ಅವಶ್ಯಕತೆ ಸರ್ಕಾರಕ್ಕೆ ಇದೆ. ಆದ್ದರಿಂದ ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಇವತ್ತು ಸರ್ಕಾರ ತ್ವರಿತವಾಗಿ ಕ್ರಮವನ್ನು ಕೈಗೊಳ್ಳಬೇಕು. ಇವತ್ತು ಭೂರಹಿತ ರೈತರು ಜಮೀನನ್ನು ಅಕ್ರಮವಾಗಿ ಸಾಗುವಳಿ ಮಾಡಿದ್ದಾರೆ. ಸರ್ಕಾರ ಇದನ್ನು ಸಕ್ರಮಗೊಳಿಸುವ ಬಗ್ಗೆ ಈಗ ಅರ್ಜಿಯನ್ನು ಹಾಕಿಕೊಂಡು ಇವತ್ತು ಮಂಜೂರಾತಿಗಾಗಿ ಕಾಯುತ್ತಿದ್ದಾರೆ. ಮಂಜೂರಾತಿಯನ್ನು ಮಾಡಿಸಿಕೊಂಡವರಿಗೂ ಕೂಡ ಹಕ್ಕುಪತ್ರಕ್ಕಾಗಿ ಕಾಯುತ್ತಿದ್ದಾರೆ. ಇವೆಲ್ಲಾ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಇವತ್ತು ಸರ್ಕಾರ ತ್ವರಿತವಾಗಿ ಕ್ರಮವನ್ನು ಕೈಗೊಳ್ಳಬೇಕೆಂದು ನಾನು ತಮ್ಮ ಮೂಲಕ ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಆಂಜನಮೂರ್ತಿ (ನೆಲಮಂಗಲ) : ಮಾನ್ಯ ಅಧ್ಯಕ್ಷರೆ, ಹಿಂದೆ ಮಾನ್ಯ ದೇವರಾಜ್ ಅರಸುರವರು ಮುಖ್ಯಮಂತ್ರಿಗಳಾಗಿದ್ದಾಗ ಎರಡು ಕ್ರಾಂತಿಕಾರಕ ಸುಧಾರಣೆಗಳನ್ನು ತಂದರು. "ಉಳುವನೆ ಭೂಮಿಯ ಒಡೆಯ", ಅಂದರೆ ಅಕ್ರಮ ಸಕ್ರಮವನ್ನು ಮಾಡುವುದು ಆ ದಿಸೆಯಲ್ಲಿ ಇವತ್ತು ನಮ್ಮ ಸರ್ಕಾರ ಮುಂಚೂಣಿಯಲ್ಲಿದೆ. ನಮ್ಮ ಪಕ್ಕದ ರಾಜ್ಯಗಳಾದ ಆಂಧ್ರದಲ್ಲಿಲ್ಲ, ಚೆನ್ನೈನಲ್ಲಿಲ್ಲ. ಅವತ್ತು ಹೆಚ್ಚಿಗೆ ಬಡರೈತರ ದೃಷ್ಟಿಯಿಂದ ಈ ಸುಧಾರಣೆ ಜಾರಿಗೆ ಬಂದಿತು. ಇಡೀ ರಾಜ್ಯದಲ್ಲಿ ಸಾವಿರಾರು ಜನರು ಗೋಮಾಳದಲ್ಲಿ ಅಕ್ರಮವಾಗಿ ಸಾಗುವಳಿಯನ್ನು ಮಾಡುತ್ತಿದ್ದಾರೆ. ಇವತ್ತು ಹೈಕೋರ್ಟಿನವರು ಜಡ್ಜ್‌ಮೆಂಟ್‌ನ್ನು ಕೊಟ್ಟು ಬಿಟ್ಟಿದ್ದಾರೆ. ಆ ಜಡ್ಜ್‌ಮೆಂಟ್ ಕೊಟ್ಟ ತಕ್ಷಣ ನಮ್ಮ ಅಧಿಕಾರಿಗಳು ಯೋಚನೆಯನ್ನು ಮಾಡದೆ ನಮ್ಮ ಅಧಿಕಾರಿಗಳು ಕೊಟ್ಟಿರುವುದೆಲ್ಲವನ್ನು ವಾಪಸ್ಸು ತೆಗೆದುಕೊಂಡು ಬಿಡಿ ಎಂದು ಎಲ್ಲಾ ಜಿಲ್ಲಾಧಿಕಾರಿಗಳಿಗೆ ಪತ್ರವನ್ನು ಬರೆದುಬಿಟ್ಟಿದ್ದಾರೆ. ಅವರೆಲ್ಲರಿಗೂ ಕೊಟ್ಟಿರುವುದನ್ನು ನಿಲ್ಲಿಸಿ ಎಂದು ಹೇಳಿದ್ದಾರೆ. ಕಳೆದ ವರ್ಷದಿಂದ ಲ್ಯಾಂಡ್ ಟ್ರಿಬ್ಯೂನಲ್ ಲ್ಯಾಂಡ್ ಗ್ರಾಂಟ್ ಕಮಿಟಿಯಾಗದೆ ಹಿಂದೆ ಆದಂತಹ ಸಾವಿರಾರು

ಎಕರೆ, ಸಾವಿರಾರು ಬಡ ಜನರ ಜಮೀನು ಮಂಜೂರಾಗಿತ್ತು. ಈ ಸರ್ಕಾರದಿಂದ ಸುತ್ತೋಲೆ ಹೋದ ನಂತರ ಎಲ್ಲವೂ ಸ್ಥಗಿತಗೊಂಡಿದೆ. ನಾನು ತಮ್ಮ ಮುಖಾಂತರ ಸರ್ಕಾರಕ್ಕೆ ಮನವಿ ಮಾಡಿಕೊಳ್ಳುವುದೇನೆಂದರೆ, ಏನು ಬಡ ರೈತರಿಗೆ ಮಂಜೂರಾಗಿರುವಂತಹ ಜಮೀನನ್ನು ರೈತರಿಗೆ ವಿತರಣೆ ಮಾಡಬೇಕು. ಮುಂದೆ ಆಗುವಂತಹ ಅನಾಹುತವನ್ನು ತಪ್ಪಿಸುವುದಕ್ಕಾಗಿ ಸರ್ಕಾರ ಯಾವುದಾದರೂ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕು. ಹೈಕೋರ್ಟ್ ಆದನಂತರ ಸುಪ್ರಿಂಕೋರ್ಟ್ ಇದೆ. ಅದಾದ ಮೇಲೆ ಇಲ್ಲಿ ಏನಾದರೂ ಅಮೆಂಡ್‌ಮೆಂಟ್‌ನ್ನು ತಂದು ರೈತರ ಪರವಾಗಿ ಕೆಲಸ ಮಾಡುವ ಬಗ್ಗೆ ತಾವು ಸೂಚನೆಯನ್ನು ಕೊಡಬೇಕೆಂದು ತಮ್ಮ ಮೂಲಕ ನಾನು ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ವೈಜನಾಥ ಪಾಟೀಲ್ : ಸುಪ್ರಿಂಕೋರ್ಟ್ ಜಡ್ಜ್‌ಮೆಂಟ್ ಬಂತು, ಏನೆಂದರೆ ಫಾರೆಸ್ಟ್ ಲ್ಯಾಂಡ್ ಇದೆ, ಅದನ್ನು ಗ್ರಾಂಟ್ ಮಾಡಬೇಕು. ಫಾರೆಸ್ಟ್ ಲ್ಯಾಂಡ್‌ನ್ನು ಮಾಡಬೇಕೆಂದು ನಾವು ಹೇಳುತ್ತಿಲ್ಲ. ಬಹಳ ವರ್ಷಗಳಿಂದ ಸಾಗುವಳಿ ಮಾಡುತ್ತಿದ್ದಾರೆ ಏನು ಫಾರೆಸ್ಟ್ ಇರಲಿಲ್ಲ, ಅಂತದ್ದು ಕೂಡ ಗ್ರಾಂಟ್ ಮಾಡುವುದಕ್ಕೆ ಪ್ರಾವಿಜನ್ ಮೊದಲೆ ರಾಜ್ಯ ಸರ್ಕಾರದಲ್ಲಿತ್ತು. ಆದರೆ ಹೊಸದಾಗಿ ಬೇರೆ ಲ್ಯಾಂಡ್‌ನ್ನು ಗ್ರಾಂಟ್ ಮಾಡಬಾರದು. ಇದು ಹೈಕೋರ್ಟಿನ ಜಡ್ಜ್‌ಮೆಂಟ್. ಹೈಕೋರ್ಟಿನ ಜಡ್ಜ್‌ಮೆಂಟ್ ಆಗಿ ಸುಮಾರು ತಿಂಗಳಾಯಿತು. ಇದನ್ನು ಅಪೀಲು ಮಾಡುವುದಕ್ಕೆ ಟೈಮ್ ಕೂಡ ಇರುವುದಿಲ್ಲ. ಇದರ ಬಗ್ಗೆ ಅಪೀಲು ಮಾಡಬೇಕೆಂದು ಹೇಳುತ್ತಿದ್ದಾರೆ. ನಮ್ಮ ಸರ್ಕಾರಿ ವಕೀಲರಾಯಿತು, ಸರ್ಕಾರ ಆಯಿತು, ಇವತ್ತು ಏನು ಮಾಡುತ್ತಿದ್ದಾರೆ? ಅಲ್ಲಿ ಏನು ಜಡ್ಜ್‌ಮೆಂಟ್ ಕೊಟ್ಟರು, ಆಗ ಇವರು ಪ್ರಯತ್ನ ಮಾಡಿರುವುದಿಲ್ಲ. ಈ ವಿಷಯಗಳ ಬಗ್ಗೆ ಜಸ್ಟಿಫೈ ಮಾಡಿದ್ದಾರೆಯೇ ಇಲ್ಲವೇ ಅಂತಹವರ ವಿರುದ್ಧವೂ ಕೂಡ ಕ್ರಮವನ್ನು ತೆಗೆದುಕೊಳ್ಳಬೇಕಾಗಿತ್ತು. ಈ ಸರ್ಕಾರಿ ವಕೀಲರು, ಬಹಳಷ್ಟು ವಿಷಯಗಳಲ್ಲಿ ಮನಬಂದಂತೆ ಹೇಗೆ ಬೇಕೋ ಹಾಗೆ ಜಡ್ಜ್‌ಮೆಂಟ್ ಕೊಟ್ಟರು ಅಂದರೆ ಅದರ ಪ್ರಕಾರ ಹೂಂ ಅಂದು ಬರುತ್ತಾರೆ. ಇದರ ಬಗ್ಗೆಯೂ ಕೂಡ ಸರ್ಕಾರ ಗಂಭೀರವಾಗಿ ವಿಚಾರ ಮಾಡಬೇಕಾಗುತ್ತದೆ. ಇಲ್ಲದಿದ್ದರೆ ಸರ್ಕಾರಿ ವಕೀಲರು ಯಾರು ಕೂಡ ಫ್ರೀಯಾಗಿ ಅಲ್ಲಿ ಮಾಡುವುದಿಲ್ಲ. ಅಲ್ಲಿ ಸರಿಯಾಗಿ ಫೈಟ್ ಮಾಡುವುದಿಲ್ಲ. ಸುಪ್ರಿಂಕೋರ್ಟಿನಲ್ಲಿ ಬಡವರ ವಿರುದ್ಧವಾಗಿಯೇ ಜಡ್ಜ್‌ಮೆಂಟಾಯಿತು. ಹೈಕೋರ್ಟ್‌ನಲ್ಲಿಯೂ ಕೂಡ ಬಡ ರೈತರ ವಿರುದ್ಧವೇ ಜಡ್ಜ್‌ಮೆಂಟಾಯಿತು. ಆ ದೃಷ್ಟಿಯಿಂದ ಇವತ್ತು ಮತ್ತೆ ಕಾನ್‌ಸ್ಟಿಟ್ಯೂಶನಲ್ ಅಮೆಂಡ್‌ಮೆಂಟ್ ಮಾಡುವಂತಹ ಪರಿಸ್ಥಿತಿ ನಿರ್ಮಾಣವಾಗಬಹುದು. ಅಪೀಲು ಮಾಡುವುದಕ್ಕೆ ಪ್ರಾವಿಜನ್ ಇಲ್ಲದಿದ್ದರೆ ಆ ರೀತಿ ಆಗುತ್ತದೆ. ಆದರೆ ವಕೀಲರುಗಳು ಇದರ ಬಗ್ಗೆ ಗಂಭೀರವಾಗಿ ವಿಚಾರವನ್ನು ಮಾಡಬೇಕು. ಇದರ ಬಗ್ಗೆ ಸರ್ಕಾರಕ್ಕೆ ಅರಿವೇ ಇಲ್ಲ ಎಂದು ನನಗನಿಸುತ್ತದೆ. ಸುಮಾರು 9 ತಿಂಗಳ ಹಿಂದೆಯೇ ತೀರ್ಪು ಆಗಿದೆ ಎಂದರೆ ಇಲ್ಲಿಯವರೆವಿಗೂ ಇವರು

ಸುಮ್ಮನೆ ಕುಳಿತಿದ್ದಾರೆ. ಸರ್ಕಾರಕ್ಕೆ ಅರಿವೆ ಇಲ್ಲದಂತೆ ಇದೆ. ಇದರ ಬಗ್ಗೆ ಏನು ಮಾಡಬೇಕು, ಇದರ ಬಗ್ಗೆ ಸುಪ್ರೀಂಕೋರ್ಟಿಗೆ ಹೋಗಬೇಕೇ? ಸುಪ್ರೀಂಕೋರ್ಟಿಗೆ ಹೋಗಬೇಕಾದರೆ, ಗ್ರೌಂಡ್ ಇರ್ ೋ ಇಲ್ಲವೋ ಇಲ್ಲದೆ ಇದ್ದೆರ ಕಾನ್ಸ್ಟಿಟ್ಯೂಷನ್ ಅಮೆಂಡ್‌ಮೆಂಟ್ ಮಾಡಬೇಕಾಗುತ್ತದೆ. ಪ್ರತಿಯೊಂದು ಗ್ರಾಮದಲ್ಲಿಯೂ ಕೂಡ ಸಮಸ್ಯೆ ಇದೆ. ಆ ದೃಷ್ಟಿಯಿಂದ ಸರ್ಕಾರ ಗಂಭೀರವಾಗಿ ಈ ಸಮಸ್ಯೆಯನ್ನು ಪರಿಗಣನೆಗೆ ತೆಗೆದುಕೊಳ್ಳಬೇಕೆಂದು ನನ್ನ ಮನವಿ.

ಅಧ್ಯಕ್ಷರು : ಮಾನ್ಯ ಕಂದಾಯ ಸಚಿವರೇ ತಾವು ಮಾತನಾಡಿ.

ಶ್ರೀ ಜಗದೀಶಶೆಟ್ಟರ್ (ಮಾನ್ಯ ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರುಗಳೆಲ್ಲರೂ ಗೋಮಾಳ ಭೂಮಿಯ ಬಗ್ಗೆ ತಮ್ಮ ಭಾವನೆಗಳನ್ನು ವ್ಯಕ್ತಪಡಿಸಿದ್ದಾರೆ. ತಮ್ಮ ವಿಚಾರಗಳನ್ನು ಇಲ್ಲಿ ಹೇಳಿದ್ದಾರೆ. ಇವತ್ತು ಏನು ಗೋಮಾಳ ಭೂಮಿ ಲಕ್ಷಾಂತರ ಜನ ರೈತರು ಇವತ್ತು ಸಾಗುವಳಿಯನ್ನು ಮಾಡುತ್ತಿದ್ದಾರೆ; ಇದು ವಸ್ತುಸ್ಥಿತಿಯಾಗಿದೆ. ನಾನು ಲಿಖಿತವಾಗಿ ಉತ್ತರವನ್ನು ಕೊಡುವಂತಹ ಸಂದರ್ಭದಲ್ಲಿ ಎಷ್ಟು ಅರ್ಜಿಗಳು ಇವೆ. ಅದರಲ್ಲಿ ಎಷ್ಟು ಅರ್ಜಿಗಳು ಡಿಸ್‌ಪೋಸಲ್ ಆಗಿದೆ, ಮತ್ತು ಎಷ್ಟು ಗೋಮಾಳ ಜಮೀನುಗಳನ್ನು ಅತಿಕ್ರಮಣವಾಗಿ ಇವತ್ತು ರೈತರು ಸಾಗುವಳಿ ಮಾಡುತ್ತಿದ್ದಾರೆನ್ನುವ ಬಗ್ಗೆ ಸದನದ ಗಮನಕ್ಕೆ ನಾನು ತೆಗೆದುಕೊಂಡು ಬಂದಿದ್ದೇನೆ. ಈ ಒಂದು ಸಂದರ್ಭದಲ್ಲಿ ಅಲ್ಲಿ ಅರ್ಜಿಯನ್ನು ಕೊಡಲು 14-9-91 ಮೊದಲನೆಯ ಕಟ್ ಆಫ್ ಡೇಟ್ ಆಗಿತ್ತು. ಮತ್ತೊಂದು ಅದರ ಅವಧಿ 30-4-1999ರವರೆಗೆ ವಿಸ್ತರಣೆಯಾಯಿತು. ಎರಡು ಸಲ ಇದರ ಅವಧಿಯನ್ನು ವಿಸ್ತರಿಸಲಾಯಿತು. ಅಂದರೆ, ಆ ಅವಧಿಯಲ್ಲಿ ಅಂದರೆ cut of date ಗಿಂತಲೂ ಮುಂಚೆ 14-9-99ಕ್ಕಿಂತಲೂ ಮುಂಚೆ ಯಾರು ಸಾಗುವಳಿ ಮಾಡುತ್ತಿದ್ದರು. ಅವರಿಂದ ಅರ್ಜಿ ತೆಗೆದುಕೊಂಡು ಅಂದರೆ, ರೆಗ್ಯುಲರೈಸ್ ಮಾಡುವುದಕ್ಕೆ ಸೆಕ್ಷನ್ 94(ಎ), 94(ಬಿ), 94(ಸಿ)ರಲ್ಲಿ ಅವಕಾಶ ಕೊಡುವಂತಹ ಒಂದು ಕಾನೂನು ಮಾಡಿದಂಥ ಸಂದರ್ಭದಲ್ಲಿ ಸುಮಾರು 5 ಲಕ್ಷದಷ್ಟು ಅರ್ಜಿಗಳು ವಿಚಾರಣೆಗೆ ಪೆಂಡಿಂಗ್ ಇದೆ. ಈ ಸಂದರ್ಭದಲ್ಲಿ ಅಕ್ರಮ-ಸಕ್ರಮ ಕಮಿಟಿಗಳನ್ನು ಪುನರ್ ರಚಿಸಬೇಕಾಗಿದೆ. ಹೀಗಾಗಿ, ಬಹಳಷ್ಟು ಶಾಸಕರು ಅನೇಕ ಭಾವನೆಗಳನ್ನು ವ್ಯಕ್ತಪಡಿಸಿದರು. ಇವತ್ತು ಒಂದು ಕಡೆ ಅಕ್ರಮ-ಸಕ್ರಮ ಕಮಿಟಿ ಮಾಡುತ್ತಿದ್ದೇವೆ. ಈ ರೀತಿಯಾದ ಹೈಕೋರ್ಟ್ ತೀರ್ಪು ನಮ್ಮ ಮುಂದಿರುವಂಥ ಸಂದರ್ಭದಲ್ಲಿ ನಾವು ಇವುಗಳನ್ನು ಯಾವ ರೀತಿ ಡಿಸ್‌ಪೋಸ್ ಮಾಡಬೇಕೆಂಬ ಭಾವನೆ ಮಾನ್ಯ ಸದಸ್ಯರುಗಳು ವ್ಯಕ್ತಪಡಿಸಿದ್ದಾರೆ ಮತ್ತು ಈ ರೀತಿ ಅಕ್ರಮ ಸಾಗುವಳಿ ಮಾಡುತ್ತಿರುವಂಥ ಲಕ್ಷಾಂತರ ರೈತರ ಪರಿಸ್ಥಿತಿ ಏನು ಅವರ ರಕ್ಷಣೆ ಏನು, ಮುಂತಾದ ವಿಚಾರಗಳೆಲ್ಲವನ್ನೂ ಇಲ್ಲಿ ಎತ್ತಿದ್ದಾರೆ. ಇವತ್ತು ಹೈಕೋರ್ಟ್ ತೀರ್ಪು ನಮ್ಮ ಮುಂದಿದೆ. ಆದರೆ, ಆ ತೀರ್ಪಿನಲ್ಲಿ ಈಗಾಗಲೇ ಯಾರು ಜಮೀನಿನಲ್ಲಿ ಕಬ್ಜಾದಲ್ಲಿದ್ದಾರೆ, ಅವರನ್ನು ಹೊರಕ್ಕೆ ಹಾಕಬೇಕೆಂದು ಎಲ್ಲೂ ಅಬ್ಸರ್ವೇಶನ್ ಮಾಡಿಲ್ಲ. ಮಂಜೂರು ಮಡಬಾರದೆಂಬ ಅಬ್ಸರ್ವೇಶನ್ ಇದೆ.

ಶ್ರೀ ಹೆಚ್.ಸಿ. ಬಾಲಕೃಷ್ಣ : ಸಾಗುವಳಿ ಮುಂದುವರೆಸಬಾರದೆಂದು ತೀರ್ಪಿನಲ್ಲಿ ಇದೆ. ಮುಂದುವರೆಸಬಾರದೆಂದರೆ ಆಚೆಗೆ ಹಾಕಿದ್ದಾರೆಂದು ಅರ್ಥ.

ಶ್ರೀ ಜಗದೀಶ್ ಶೆಟ್ಟರ್ : ಹೈಕೋರ್ಟ್ ತೀರ್ಪು ಓದಿ. ಅದು ಬೇರೆ. ನೀವು ಜಡ್ಜ್‌ಮೆಂಟ್ ಅನ್ನು ಪೂರ್ತಿಯಾಗಿ ಓದಿ.

ಅಧ್ಯಕ್ಷರು : ಅವರು ಏನು ಹೇಳುತ್ತಾರೆಂಬುದನ್ನು ಕೇಳಿ. ಸುಮ್ಮನೆ ಮಧ್ಯೆ ಎದ್ದು ನಿಂತುಕೊಂಡು ಮಾತನಾಡಿದರೆ ಹೇಗೆ? ಅನಂತರ ಹೇಳಿ. Allow him to reply.

ಶ್ರೀ ಜಗದೀಶ್ ಶೆಟ್ಟರ್ : ಹೀಗಾಗಿ, ಈಗ ಇದನ್ನು ಯಾರು ಅತಿಕ್ರಮವಾಗಿ ಸಾಗುವಳಿ ಮಾಡುತ್ತಿದ್ದಾರೆ, ಅವರ ರಕ್ಷಣೆಯ ಪ್ರಶ್ನೆ ಬಂದಿದೆ. ಅದರ ಮೂಲಕ ಅವರಿಗೆ ಟೈಟಲ್ಸ್ ಸಿಗುವುದಿಲ್ಲ. ಯಾವುದೇ ರೀತಿ ಮಾರುವುದಕ್ಕೂ ಅವರಿಗೆ ಹಕ್ಕು ಇಲ್ಲ. ಈ ರೀತಿಯಾದ ಪರಿಸ್ಥಿತಿ ಇದೆ. ಅವರನ್ನು ಹೊರಕ್ಕೆ ಹಾಕುವಂಥ ಪ್ರಯತ್ನವನ್ನು ಸರ್ಕಾರ ಯಾವತ್ತೂ ಮಾಡಿಲ್ಲ. ಕಬ್ಜಾ ತೆಗೆದುಕೊಳ್ಳುವಂಥ ಪ್ರಯತ್ನ ಯಾವತ್ತೂ ಮಾಡಿಲ್ಲ. ಇಲ್ಲಿ ಪ್ರಶ್ನೆ ಬಂದಿರುವುದೇನೆಂದರೆ, ಹೈಕೋರ್ಟ್ ತೀರ್ಪು ನಮ್ಮ ಮುಂದಿದೆ. ಹಾಗಾದರೆ, ಹೈಕೋರ್ಟ್ ತೀರ್ಪಿನ ವಿರುದ್ಧ ಏಕೆ ಮೇಲ್ಮನವಿ ಸಲ್ಲಿಸಲಿಲ್ಲ? 22ನೇ ಸೆಪ್ಟೆಂಬರ್ 2005ರಂದು ಈ ತೀರ್ಪು ಬಂದಿದೆ. ಇವತ್ತು ನಾವು ಏಪ್ರಿಲ್ ತಿಂಗಳಿನಲ್ಲಿದ್ದೇವೆ. ಅಪೀಲ್ ಮಾಡುವ ಅವಧಿ ಮುಗಿದಿದೆ. ಆ ಸಂದರ್ಭದಲ್ಲಿ ಆ ಮೇಲ್ಮನವಿ ಮಾಡಬಾರದೆಂಬ ನಿರ್ಣಯವನ್ನು ಅವತ್ತಿನ ಸಂದರ್ಭದಲ್ಲಿ ತೆಗೆದುಕೊಳ್ಳಲಾಯಿತು. ಹೀಗಾಗಿ, ಮೇಲ್ಮನವಿ ಆಗಿಲ್ಲ. ಆದರೆ, ಡಿಲೇ ಕಂಡೋನ್ ಮಾಡಿ ಅಪೀಲ್ ಮಾಡಬೇಕಾಗುತ್ತದೆ.

ಶ್ರೀ ಆಂಜನಮೂರ್ತಿ : ಮೇಲ್ಮನವಿ ಹೋಗಬಾರದೆಂದು ಯಾರು ತೀರ್ಮಾನ ತೆಗೆದುಕೊಂಡಿದ್ದಾರೆ?

ಶ್ರೀ ಹೆಚ್.ಸಿ. ಬಾಲಕೃಷ್ಣ : ಕ್ಯಾಬಿನೆಟ್ ತೆಗೆದುಕೊಂಡಿದೆಯೇ? ಸರ್ಕಾರ ತೆಗೆದುಕೊಂಡಿದೆಯೇ? ದಯವಿಟ್ಟು ಸ್ಪಷ್ಟೀಕರಣ ಕೊಡಬೇಕಾಗುತ್ತದೆ. ಅಧಿಕಾರಿಗಳು ತೀರ್ಮಾನ ತೆಗೆದುಕೊಂಡರೆ.....

ಶ್ರೀ ಜಗದೀಶ್ ಶೆಟ್ಟರ್ : ಇದರ ಬಗ್ಗೆ ಅಪೀಲ್ ಮಾಡಬೇಕಾದರೆ ಡಿಲೇ ಕಂಡೋನ್ ಮಾಡುವುದಕ್ಕೆ ಸಾಧ್ಯವಿದೆ. ಅದರ ಬಗ್ಗೆ ವಿಚಾರ ಮಾಡುತ್ತೇವೆ. ನಾನು ಹೇಳುವುದನ್ನು ಪೂರ್ತಿಯಾಗಿ ಕೇಳಿ. ಇದು ನನ್ನ ಗಮನಕ್ಕೆ ಬಂದ ತಕ್ಷಣ ಅಧಿಕಾರಿಗಳ ಜೊತೆ ಸಮಾಲೋಚಿಸಿದ್ದೇನೆ. ಎಲ್ಲಿಯವರೆಗೆ ಅಂದರೆ, ಇದನ್ನು ಏಕೆ ಅಪೀಲ್ ಮಾಡಲಿಲ್ಲೆವೆಂದು ಅಧಿಕಾರಿಗಳ ಜೊತೆ ಸಮಾಲೋಚಿಸಿ, ಡಿಲೇ ಕಂಡೋನ್ ಮಾಡಿ ಏಕೆ ಮಾಡಬಾರದೆಂದು, ಅದರ ಬಗ್ಗೆಯೂ ಸಮಾಲೋಚಿಸಿ ಚಿಂತನೆ ಮಾಡಿದ್ದೇವೆ. ಕಾನೂನು ಅಭಿಪ್ರಾಯ ನಾನು ತೆಗೆದುಕೊಳ್ಳುತ್ತಿದ್ದೇನೆ. ಇದರ ಜೊತೆಗೆ ಇವತ್ತು ಸುಮಾರು ಐದು ಲಕ್ಷದಷ್ಟು ಅರ್ಜಿಗಳು ಪೆಂಡಿಂಗ್ ಇದೆ. ಕಲಂ ನಂಬರ್ 94(ಎ), 94(ಬಿ),

94(ಸಿ) –ಈ ಸೆಕ್ಷನ್‌ಗಳಡಿ ಅರ್ಜಿಗಳು ಪೆಂಡಿಂಗ್ ಇರುವ ಬಗ್ಗೆ ಸೆಪ್ಟೆಂಬರ್ ತಿಂಗಳಿನಲ್ಲಿ ಏನು ತೀರ್ಮ ಬಂದಿದೆ. ಸದರಿ ಸೆಕ್ಷನ್‌ಗಳಡಿಯಲ್ಲಿ ಏನೇನು ಅರ್ಜಿಗಳು ಪೆಂಡಿಂಗ್ ಇವೆ, ಅದರ ಬಗ್ಗೆಯೂ ಯಾವುದೇ ಅಬ್ಸರ್ವೇಶನ್ ಮಾಡಿಲ್ಲ. ಹೀಗಾಗಿ, ಇವತ್ತು ಆ ಅರ್ಜಿಗಳನ್ನು ಡಿಸ್‌ಪೋಸ್ ಮಾಡುವುದಕ್ಕೆ ಏನಾದರೂ ತೊಂದರೆಯಾಗುತ್ತಿದೆಯೇ? ಇಲ್ಲವೇ? ಅಡೆತಡೆ ಆಗುತ್ತದೆಯೇ? ಇಲ್ಲವೇ? ಇದರ ಬಗ್ಗೆ ಕಾನೂನು ಇಲಾಖೆಯ ಅಭಿಪ್ರಾಯ ಕೇಳಿದ್ದೇವೆ. ಏಕೆಂದರೆ, ತೀರ್ಪಿನಲ್ಲಿ ಇದು silent ಇದೆ. ಸೆಕ್ಷನ್‌ಗಳಲ್ಲಿ ಅರ್ಜಿಗಳನ್ನು ಏನು ಮಾಡಬೇಕೆಂಬ ಬಗ್ಗೆ silent ಇದೆ. ಇದರ interpretation ಬಗ್ಗೆ ಕಾನೂನು ಅಭಿಪ್ರಾಯ ಕೇಳಿದ್ದೇನೆ. ಇನ್ನೊಂದು ವಿಷಯವೇನೆಂದರೆ, ಬಹಳಷ್ಟು ನಮ್ಮ ಶಾಸಕರು ಅಭಿಪ್ರಾಯಗಳನ್ನು ಕೊಟ್ಟಿದ್ದಾರೆ. ಇದಕ್ಕೆ Land Revenue Actಗೆ ಕಾನೂನು ತಿದ್ದುಪಡಿ ಮಾಡಿ ಅಕ್ರಮ–ಸಕ್ರಮ ಬಗ್ಗೆ ಅವರಿಗೆ ರಕ್ಷಣೆ ಕೊಡುವ ಬಗ್ಗೆ ಅಮೆಂಡ್‌ಮೆಂಟ್ ಮಾಡುವಂತಾದ್ದರ ಬಗ್ಗೆ ಅಭಿಪ್ರಾಯ ಹೇಳಿದ್ದಾರೆ. ಆ ಕುರಿತಾದ ಅಮೆಂಡ್‌ಮೆಂಟ್ ಬಗ್ಗೆ ಸಹ ನಾನು ಕಾನೂನು ಇಲಾಖೆಯ ಅಭಿಪ್ರಾಯ ಪಡೆದುಕೊಂಡಿದ್ದೇನೆ. ಹೀಗಾಗಿ, ಇವತ್ತು ಅಕ್ರಮ–ಸಕ್ರಮ ಏನು ಸಾಗುವಳಿ ಮಾಡುತ್ತಿದ್ದಾರೆ, ಅರ್ಜಿಗಳು ಏನು ಪೆಂಡಿಂಗ್ ಇದೆ, ಅದರ ಬಗ್ಗೆ ಆದಷ್ಟು ಬೇಗ ಕಾನೂನು ಇಲಾಖೆಯ ಅಭಿಪ್ರಾಯ ಕೇಳಿಕೊಂಡು ಅವರ ರಕ್ಷಣೆಗೆ ಏನು ಮಾಡುವುದಕ್ಕೆ ಸಾಧ್ಯವಿದೆಯೋ, ಸರ್ಕಾರ ಅದನ್ನು ಮಾಡುವುದಕ್ಕೆ ಕ್ರಮ ಕೈಗೊಳ್ಳುತ್ತದೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಂಜೂರು ಮಾಡಿ ರೆಸಲ್ಯೂಶನ್ ಆಗಿದೆ. ಸಾಗುವಳಿ ಚೀಟಿ ಇಶ್ಯೂ ಮಾಡುವ ಸ್ಟೇಜ್‌ನಲ್ಲಿರುವವರಿಗೆ ಏನು ಮಾಡುವುದು?

ಶ್ರೀ ಹೆಚ್.ಸಿ. ಬಾಲಕೃಷ್ಣ : ಅದರ ಜೊತೆಯಲ್ಲಿ ಈಗ ನಗರ ಜಿಲ್ಲೆ ವ್ಯಾಪ್ತಿಯಲ್ಲಿ ಸೈಟುಗಳನ್ನು ಕೊಡುವುದಕ್ಕೆ ಆಶ್ರಯ ಸೈಟುಗಳನ್ನೇ ಅವಲಂಬಿಸಬೇಕು. ಏಕೆಂದರೆ, ಇಲ್ಲಿ ಜಮೀನು ದುಬಾರಿಯಾಗಿದೆ. ದಯಮಾಡಿ ಗೋಮಾಳ ಜಮೀನಿನಲ್ಲಿ ಆಶ್ರಯ ಸೈಟುಗಳನ್ನು ಕೊಡುವುದಕ್ಕೆ ಈ ಸಂಬಂಧದ ಕಾನೂನಿಗೆ ಏನಾದರೂ ತಿದ್ದುಪಡಿ ತರಬೇಕು.

ಶ್ರೀ ಎಂ.ಪಿ. ವೆಂಕಟೇಶ್ : ಇನ್ನೊಂದು ವಿಷಯವನ್ನು ಮಾನ್ಯ ಸಚಿವರು ಅರ್ಥ ಮಾಡಿಕೊಳ್ಳಬೇಕು. ನಮ್ಮ ರಾಜ್ಯದ ಖನಿಜ, ಗಣಿ, ಐರನ್ ಓರ್ ಆಗಲಿ, ಗ್ರಾನೈಟ್ ಆಗಲಿ, ಎಲ್ಲವೂ ಗೋಮಾಳ ಜಮೀನಿನಲ್ಲೆ ಇರುವುದು. ಸಾವಿರಾರು ಅರ್ಜಿಗಳಿವೆ. ಇವತ್ತು ಎಲ್ಲವನ್ನೂ ನಿಲ್ಲಿಸಿದರೆ ಗ್ರಾನೈಟ್, ಐರನ್ ಓರ್, ಎಲ್ಲವನ್ನೂ ಕಾನೂನಿನಡಿ ನಿಲ್ಲಿಸಬೇಕಾಗುತ್ತದೆ. ಯಾರಿಗೆ ಅನ್ಯಾಯವಾಗಿದೆ. ಅವರು ಹೈಕೋರ್ಟ್‌ಗೆ ಹೋಗಿ ಇದೆಲ್ಲವನ್ನೂ ಮಾಡಿರುವುದು. ಹಿಂದೆ ಒಬ್ಬೊಬ್ಬರೇ ಲಿಸ್ಟ್ ತೆಗೆದುಕೊಂಡು ಒಬ್ಬರೇ ಮಂತ್ರಿಗಳು ಸಾವಿರಾರು ಎಕರೆ ತೆಗೆದುಕೊಂಡು ಅನ್ಯಾಯ ಆಗುತ್ತಿತ್ತಲ್ಲ. ಅದರ ಮೇಲೆ ಹೈಕೋರ್ಟ್‌ಗೆ ಹೋಗಿ ಸ್ಟೇ ತಂದಿರುವುದು. ಒಂದು ಕಡೆ ರೈತರಿಗೆ ಅನ್ಯಾಯವಾಗುತ್ತಿದೆ. ಇನ್ನೊಂದು ಕಡೆ ಗೋಮಾಳ ಜಮೀನಿನಲ್ಲಿ ಕಲ್ಲು ಇರುವ ಜಾಗದಲ್ಲಿ ದನಕರುಗಳು

ಹೇಗೆ ಮೇಯುತ್ತವೆ? ಅಲ್ಲಿ ಹುಲ್ಲೇ ಇರುವುದಿಲ್ಲ ಬರೀ ಕಲ್ಲುಗಳೇ ಇರುವುದು. ಆಗ ಸರ್ಕಾರಕ್ಕೂ ಅನ್ಯಾಯವಾಗುತ್ತದೆ. ರೈತರಿಗೂ ಅನ್ಯಾಯವಾಗುತ್ತದೆ. ಆದಕಾರಣ, ಮಾನ್ಯ ಸಚಿವರು ಸರಿಯಾಗಿ ಎಲ್ಲವನ್ನೂ ಕೇಳಿ ನಂತರ ಒಂದು ತೀರ್ಮಾನ ತೆಗೆದುಕೊಳ್ಳಬೇಕು.

ಶ್ರೀ ಹೆಚ್.ಸಿ. ಬಾಲಕೃಷ್ಣ : ಗೋಮಾಳ ಜಮೀನಿನಲ್ಲಿ ಅನಧಿಕೃತವಾಗಿ ಗಣಿಗಾರಿಕೆ ಮಾಡುತ್ತಿದ್ದಾರಲ್ಲ, ಅದನ್ನು ನಿಲ್ಲಿಸಬೇಕಲ್ಲ.

ಶ್ರೀ ಎಂ.ಸಿ. ವೇಕಟೇಶ್ : ಇವತ್ತು ಸಾವಿರಾರು ಕೋಟಿ ರೂಪಾಯಿಗಳಷ್ಟು ಬೆಲೆ ಬಾಳುವ ಗೋಮಾಳ ಜಮೀನು ಇದೆ. ಖರೀದಿ ಮಾಡಿರುವವರಿಗೆ ಗೋಮಾಳ ಅಂತಲೇ ಇದೆ.

ಶ್ರೀ ಆಂಜನಮೂರ್ತಿ : ... ರೈತರ ಪರವಾಗಿ ಇರುವ ನಿಮ್ಮ ಸರ್ಕಾರ ಇದನ್ನು ಮಾಡಿದರೆ ದೊಡ್ಡ ಕ್ರಾಂತಿಕಾರಕ ಸಾಧನೆಯಾಗುತ್ತದೆ.

ಶ್ರೀ ಜಗದೀಶ್ ಶೆಟ್ಟರ್ : ಮುಂದು ಏನು ಕ್ರಮ ಕೈಗೊಳ್ಳಬೇಕೆಂಬ ಬಗ್ಗೆ ವಿಚಾರ ಹೇಳಿದ್ದೇನೆ. ಇದಕ್ಕೆ ಕಾನೂನಿನಲ್ಲಿ ತಿದ್ದುಪಡಿ ಮಾಡಿ ರೈತರಿಗೆ ಏನು ರಕ್ಷಣೆ ಕೊಡಬೇಕೆಂಬ ಬಗ್ಗೆ ನಾವು ವಿಚಾರ ಮಾಡುತ್ತೇವೆಂತಲೂ ಹೇಳಿದ್ದೆನೆ ಮತ್ತು ಹೈಕೋರ್ಟ್ ತೀರ್ಪಿನಲ್ಲಿ ಸೆಕ್ಷನ್ 94(ಎ), 94(ಬಿ), 94(ಸಿ) ಅಡಿ ಅರ್ಜಿಗಳು ಏನು ಪೆಂಡಿಂಗ್ ಇದೆ, ಅದರ ಬಗ್ಗೆ ಯಾವುದೇ ಅಬ್ಸರ್ವೇಶನ್ ಇಲ್ಲ. ಅದು ಸೈಲೆಂಟ್ ಇದೆ. ಈಗ ಅದರ ಬಗ್ಗೆ ಕಾನೂನಿನ ಅಭಿಪ್ರಾಯ ತೆಗೆದುಕೊಂಡು ಮುಂದಿನ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ. ಆಗ ರೈತರಿಗೆ ರಕ್ಷಣೆ ಕೊಡುವ ಕೆಲಸ ನಾವು ಮಾಡುತ್ತೇವೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ನನ್ನ ಪಾಯಿಂಟ್‌ಗೆ ಉತ್ತರ ಹೇಳಬೇಕು. ಅರ್ಜಿಗಳು ಪೆಂಡಿಂಗ್ ಇಲ್ಲ ಅರ್ಜಿ ಡಿಸ್‌ಪೋಸ್ ಮಾಡಲಾಗಿದೆ. ಮಂಜೂರು ಮಾಡಲಾಗಿದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಇದರಲ್ಲಿ ಎರಡು ವಿಷಯಗಳಿವೆ. ಸೆಕ್ಷನ್ 94 ಲ್ಯಾಂಡ್ ಗ್ರಾಂಟ್ ಇದರಲ್ಲಿ ಅಮೆಂಡ್‌ಮೆಂಟ್ ತಂದರೆ ಒಂದು ಸ್ಕೋಪ್ ಗವರ್ನಮೆಂಟ್ ಬ್ಯಾರನ್ ಲ್ಯಾಂಡ್ ಎಷ್ಟಿರಬೇಕು. ಆ ಜಾನುವಾರು ಸೆನ್ಸಸ್ ಎಷ್ಟಿದೆಯೋ, ಅದರ ಮೇಲೆ ಅಷ್ಟು ಭೂಮಿ ಇರಬೇಕೆಂಬುದು ಇದೆ. ಆದರೆ, ರೂಲ್ಸ್‌ನಲ್ಲಿ ತಿಳಿಸಿರುವಂತೆ ಯಾವ ಹಳ್ಳಿಗಳಲ್ಲೂ ಕೂಡ ಸೆನ್ಸಸ್ ಪ್ರಕಾರ ಇವತ್ತು ಭೂಮಿ ಇಲ್ಲ. ಇವತ್ತು 10–20 ದನಗಳನ್ನು ಮೇಯಿಸುವಷ್ಟೂ ಕೆಲವು ಕಡೆ ಭೂಮಿ ಇಲ್ಲ. ಅಂಥಾದ್ದಕ್ಕೆ ಗ್ರಾಂಟ್ ಮಾಡುವಾಗ ಏನು ಮಾಡಿದರು ಎಂದರೆ, ರೂಲ್ಸ್ ಪ್ರಕಾರ ರೆಡ್ಯೂಸ್ ಮಾಡಿ ಬ್ಯಾರನ್ ಲ್ಯಾಂಡ್ ಗ್ರಾಂಟ್ ಮಾಡಿಕೊಂಡು ಕೆಲವು ಕಡೆ ಕೊಟ್ಟರು. ಕೆಲವು ಕಡೆ ಏನು ಕೊಡಲಿಲ್ಲ. ಅದು ಡಿಲೇ ಆಗಿರಬಹುದು. unauthorised cultivation Government Land ಅನ್ನು ರೆಗ್ಯುಲರೈಸ್ ಮಾಡಬೇಕೆಂದು 1991ರಲ್ಲಿ ನಾವು ಅಮೆಂಡ್‌ಮೆಂಟ್ ತಂದಿದ್ದೇವೆ. ಅದನ್ನು ಅಂದಿನಿಂದ ಕನ್‌ಫರ್ಮೇಶನ್ ಮಾಡಿಕೊಂಡಿದ್ದಾರೆ. ಆದರೆ, ಕೆಲವು ಕಡೆ ಯಾವ ಕಾರಣಕ್ಕಾಗಿ ಅದನ್ನು ಕನ್‌ಫರ್ಮ್ ಮಾಡಿಲ್ಲವೋ, ನನಗೆ ಗೊತ್ತಿಲ್ಲ. ಏಕೆಂದರೆ, ಎಲ್ಲಿ ಆಸಕ್ತಿ

ವಹಿಸಿದ್ದರೋ, ಅಲ್ಲಿ ಕನ್‌ಫರ್ಮ್ ಆಗಿದೆ. ಯಾರು ಆಸಕ್ತಿ ವಹಿಸಿಲ್ಲವೋ, ಅದನ್ನು ಹಾಗೆ ಬಿಟ್ಟುಕೊಂಡು ಬಂದಿದ್ದಾರೆ. ಇದು ಮೊದಲನೆಯದು. ಇನ್ನು ಎರಡನೆಯದು. ಅದರಲ್ಲಿ ಕಂಡಿಷನ್ಸ್ ಹಾಕಿದ್ದು. ಕಾರ್ಪೊರೇಷನ್ ಲಿಮಿಟ್‌ನಿಂದ 18 ಕಿಲೋಮೀಟರ್, 20 ಕಿಲೋಮೀಟರ್, ಅದೇ ರೀತಿ ಸಿಟಿ ಮುನಿಸಿಪಾಲಿಟಿಯಿಂದ 10 ಕಿಲೋಮೀಟರ್ ಮತ್ತು ಟೌನ್ ಮುನಿಸಿಪಾಲಿಟಿಯಿಂದ 5 ಕಿಲೋಮೀಟರ್, ಹೀಗೆ ಅದರೊಳಗೆ ಕಂಡೀಷನ್ ಹಾಕಿದ್ದಾರೆ. ಏಕೆಂದರೆ, ಅಕ್ಕಪಕ್ಕದ ಭೂಮಿಯನ್ನು unauthorised ಆಗಿ ಕಲ್ಟಿವೇಟ್ ಮಾಡುತ್ತಾರೆ. ಬಡನ ಹೆಸರಿನಲ್ಲಿ ಸ್ಯಾಂಕ್ಷನ್ ಮಾಡುವುದು. ಆನಂತರ, ಸೈಟ್ ಮಾಡಿ ಫಾರ್ಮೇಶನ್ ಮಾಡಿ ಮಾರಿಕೊಳ್ಳುವುದನ್ನು ತಪ್ಪಿಸಬೇಕೆಂದು ಅದಕ್ಕೆ ಸಿಟಿ ಲಿಮಿಟ್ ಮಾಡಿಯಾಯಿತು. ಕಾರ್ಪೊರೇಷನ್ ಲಿಮಿಟ್ ಮಾಡಲಾಯಿತು ಟೌನ್ ಮುನಿಸಿಪಾಲಿಟಿ ಲಿಮಿಟ್ ಕೂಡ ಮಾಡಲಾಯಿತು. ಈ ರೀತಿಯಾಗಿ ಸರ್ಕಾರದ ಜಮೀನನ್ನು ಮಿಸ್‌ಯೂಸ್ ಮಾಡಬಾರದೆಂಬ ದೃಷ್ಟಿಯಿಂದ ಎಷ್ಟು ಉಳಿಸಬೇಕೋ ಅಷ್ಟು ಉಳಿಸಿ ಆಯಿತು ಮತ್ತು ಯಾವ ಜಮೀನನ್ನು 20 ವರ್ಷ, 30 ವರ್ಷಗಳಿಂದ ಅಥವಾ cut of date ಮಾಡಿಸಿದ್ದೇವೆ, 14ನೇ ಏಪ್ರಿಲ್ ಡಾ: ಅಂಬೇಡ್ಕರ್ ಹುಟ್ಟುಹಬ್ಬದಿಂದ ಹಿಂದಕ್ಕೆ ಮೂರು ವರ್ಷಗಳ ಕಾಲ ಯಾರು ಸಾಗುವಳಿ ಮಾಡುತ್ತಿದ್ದರೋ, ಅವರನ್ನು ರೆಗ್ಯುಲರೈಸ್ ಮಾಡಬೇಕು. Even one year cultivate ಮಾಡಿದರೂ ಕೂಡ ಅದನ್ನು ರೆಗ್ಯುಲರೈಸ್ ಮಾಡಬೇಕು. ಡೌಟ್ ಬಂದರೆ ಅಸಿಸ್ಟೆಂಟ್ ಕಮಿಷನರ್‌ರವರು ತಪಾಸಣೆ ಮಾಡಿ ಸ್ವತಃ ಹೋಗಿ ನೋಡಿಕೊಂಡು ಅದನ್ನು ಕನ್‌ಫರ್ಮ್ ಮಾಡಬೇಕೆಂದು ಮಾಡಿದ್ದೇವೆ. ಇಷ್ಟೆಲ್ಲ ಕಾನೂನು ಇದ್ದರು ಕೂಡ ಇವತ್ತು ಹೈಕೋರ್ಟ್‌ನಲ್ಲೇನು ಸ್ಟ್ರಕ್‌ಡೌನ್ ಆಗಿದೆ ಎಂದು ಹೇಳಿ, ಆ ನೆಪದಲ್ಲಿ ಸಿಟಿ ಲಿಮಿಟ್‌ನಲ್ಲಿ ಇದ್ದದ್ದು indiscriminately grant ಮಾಡುವುದು ಆಗಬಾರದು. Out side the city ವಿಶೇಷವಾಗಿ ಹಳ್ಳಿಯಲ್ಲಿ ಇರತಕ್ಕದಕ್ಕೆ ಬೇಕಾದರೆ, ರೆಡ್ಯೂಸ್ ಮಾಡಿ ಕೊಡಲು ನಿಮಗೆ ಅಧಿಕಾರವಿದೆ. ಅದನ್ನು ನೀವು ಕೊಡಬಹುದು. ನೀವು ಅಪೀಲ್ ಹಾಕಿ. ಒಂದು ವೇಳೆ ಅಪೀಲ್ ಕೂಡ ಸಾಧ್ಯವಿಲ್ಲವೆಂದು ಅಮೆಂಡ್‌ಮೆಂಟ್‌ನ್ನೆ ತರಬೇಕೆಂದರೆ ಅಮೆಂಡ್‌ಮೆಂಟ್‌ನ್ನು ತಂದು ಕೊಡಿ. ಇಲ್ಲದಿದ್ದರೆ ಏನಾಗುತ್ತದೆಂದರೆ, ಈಗ ಅದು ಎಲ್ಲೂ ಉಳಿದಿಲ್ಲ. ಸುಮ್ಮನೆ ಹೇಳುತ್ತಾರೆ barren ಲ್ಯಾಂಡ್ ಉಳಿದಿದೆ, ಅದು ಉಳಿದಿದೆ, ಇದು ಉಳಿದಿದೆ ಎಂದು. ಎಲ್ಲೂ barren ಜಮೀನು ಉಳಿದಿಲ್ಲ. Even ಕೂರ್ಗ್‌ನಲ್ಲಿ ಸಾವಿರಾರು ಎಕರೆ ಕೇವಲ ಕಾಫಿ ಪ್ಲಾಂಟೇಷನ್‌ಗೆ ಸೊಪ್ಪಿನ ಬೆಟ್ಟವೆಂದು, ಅಲ್ಲಿ ಬದ್ದಂಥ ಸೊಪ್ಪನ್ನು ತೆಗೆದುಕೊಂಡು ಹೋಗಿ ಗೊಬ್ಬರ ಮಾಡಿ ಹಾಕುತ್ತಾರೆ. ಅದು ಸಹ ಈಗ ಉಳಿದಿಲ್ಲ. ಆ ಂತಿ ಇರುವಾಗ ಬಡವರು ಎಕರೆ, ಎರಡು ಎಕರೆ ಹೊಡೆದಿದ್ದು ಅದಕ್ಕೆ ಸೀಮಿತವಾಗಿ ಕಾನೂನನ್ನು ಯಾವ ರೀತಿಯಾಗಿ ಅಮೆಂಡ್‌ಮೆಂಟ್ ಮಾಡಬೇಕು, ಆ ಅಮೆಂಡ್‌ಮೆಂಟ್ ಸೆಕ್ಷನ್ 94ಗೆ ಆಗಲಿ ಅಥವಾ 97ಗೆ ಆಗಲಿ ಯಾವುದಕ್ಕೆ ಮಾಡಬೇಕೊ ಅದನ್ನು ತಂದರೆ ಸೂಕ್ತವಾದ ಹೆಜ್ಜೆ ಇಡಲು ಆಗುತ್ತದೆ. ಇಲ್ಲದಿದ್ದರೆ unscrupulous

element ಕೂಡ ಬೆಂಗಳೂರು ಅಂಥ ಸಿಟಿಯಲ್ಲಿ, ಮೈಸೂರು ಸಿಟಿಯಾಗಲಿ, ಬೆಳಗಾಂ ಆಗಲಿ ಇಂಥ ಕಡೆ ಮಿಸ್‌ಯೂಸ್ ಮಾಡಿರುವುದನ್ನು ನಾವು ನೋಡಿದ್ದೇವೆ. ಅದಕ್ಕಾಗಿ ಆ ರೈಡರ್ ಹಾಕಿದ್ದು, ದಯವಿಟ್ಟು ಇದೆಲ್ಲವನ್ನು ಗಮನದಲ್ಲಿಟ್ಟುಕೊಂಡು ಬೇಗನೆ ಒಂದು ಅಮೆಂಡ್‌ಮೆಂಟ್ ತನ್ನಿ. ಇಲ್ಲದಿದ್ದರೆ ತಾವು ಒಂದು ಆರ್ಡಿನೆನ್ಸ್‌ನ್ನು ಇಶ್ಯೂ ಮಾಡಿ. ಏಕೆಂದರೆ ಎಂತೆಂಥದಕ್ಕೊ ಆರ್ಡಿನೆನ್ಸ್ ಇಶ್ಯೂ ಮಾಡುತ್ತೇವೆ. ಇದನ್ನು ಪ್ರೊಟೆಕ್ಟ್ ಮಾಡುವುದಕ್ಕೆ ಆರ್ಡಿನೆನ್ಸ್ ತಂದರೆ ಎಲ್ಲರು ಸಪೋರ್ಟ್ ಮಾಡುತ್ತಾರೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ನಾನು ಇದರ ಬಗ್ಗೆ ಸ್ಪಷ್ಟವಾಗಿ ಹೇಳಿದ್ದೇನೆ. ಈಗ ಕಾನೂನು ತಿದ್ದುಪಡಿ ಮಾಡಿ ರೈತರೇನು ಅಕ್ರಮವಾಗಿ ಸಾಗುವಳಿ ಮಾಡುತ್ತಿದ್ದಾರೆ ಅವರ ರಕ್ಷಣೆ ಮಾಡುವುದರ ಬಗ್ಗೆ ಕ್ರಮ ಕೈಗೊಳ್ಳುತ್ತೇನೆ. ಈಗಾಗಲೇ ಕಾನೂನು ಇಲಾಖೆಯ ಜೊತೆ ನಾನು ಮಾತನಾಡಿದ್ದೇನೆ. ಅವರಿಗೆ ರೆಫರೆನ್ಸ್ ಮಾಡಿದ್ದೇನೆ. ಕಾನೂನು ತಿದ್ದುಪಡಿಯ ಬಗ್ಗೆಯೂ ಆಲೋಚನೆ ಮಾಡುತ್ತಿದ್ದೇನೆ. ಉಳಿದ ವಿಷಯದ ಬಗ್ಗೆಯೂ ಆಲೋಚನೆ ಮಾಡಿ ರೈತರೇನು ಅಕ್ರಮವಾಗಿ ಸಾಗುವಳಿ ಮಾಡುತ್ತಿದ್ದಾರೆ ಅವರ ರಕ್ಷಣೆ ಮಾಡುವುದಕ್ಕೆ ಸರ್ಕಾರ ಕ್ರಮ ಕೈಗೊಳ್ಳುತ್ತದೆಂದು ನಾನು ಆಗಲೆ ಹೇಳಿದ್ದೇನೆ. ಮತ್ತೊಮ್ಮೆ ಹೇಳುತ್ತೇನೆ.

ಶ್ರೀ ಆರ್.ವಿ. ದೇಶ್‌ಪಾಂಡೆ : We have to take care of this.

ಶ್ರೀ ಜಗದೀಶ್‌ಶೆಟ್ಟರ್ : ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಹಿರಿಯ ಸದಸ್ಯರು, ಅನುಭವವಿರತಕ್ಕವರು. ಅವರು ಇದರ ಬಗ್ಗೆ ಸಾಕಷ್ಟು ವಿಚಾರಗಳನ್ನು ಹೇಳಿದ್ದಾರೆ. ಅವರ ವಿಚಾರಗಳನ್ನು ಗಮನದಲ್ಲಿ ಇಟ್ಟುಕೊಂಡು ಕಾನೂನು ವ್ಯಾಪ್ತಿಯಲ್ಲಿ ಸರ್ಕಾರದಿಂದ ಏನೇನು ಮಾಡಲಿಕ್ಕೆ ಸಾಧ್ಯವಿದೆಯೊ ಅದನ್ನು ನಾವು ಮಾಡುತ್ತೇವೆ.

ಶ್ರೀ ಹೆಚ್. ನಿಂಗಪ್ಪ : ಅದರ ಬಗ್ಗೆ ತಿದ್ದುಪಡಿ ತರುವುದಕ್ಕೆ ಲೇಟಾಗುತ್ತದೆ. ಮಾನ್ಯ ಖರ್ಗೆ ಸಾಹೇಬರು ಹೇಳಿದಂತೆ ಸುಗ್ರೀವಾಜ್ಞೆ ಹೊರಡಿಸಿದರೆ ಒಳ್ಳೆಯದು.

ಶ್ರೀ ಎಸ್. ರಾಜೇಂದ್ರನ್ : ಮಾನ್ಯ ಅಧ್ಯಕ್ಷರೆ, ಸೈಂಟಿಸ್ಟ್ ತೀರಿಹೋಗಿರುವ ಬಗ್ಗೆ ಅರ್ಧ ಗಂಟೆ ಚರ್ಚೆಗೆ ಅವಕಾಶ ಕೊಡುತ್ತೇನೆಂದು ಹೇಳಿದ್ದಿರಿ. ಅದರ ಬಗ್ಗೆ ಅರ್ಧ ಗಂಟೆ ಚರ್ಚೆ ಮಾಡಿ ಎಂದು ತಾವೇ ಹೇಳಿದ್ದಿರಿ.

ಅಧ್ಯಕ್ಷರು : ಅದು ಈವತ್ತು ಇಲ್ಲ.

12. ಅರ್ಧ ಗಂಟೆ ಕಾಲ ಚರ್ಚೆ

(ಅ) ವಿಷಯ: ನೈಸರ್ಗಿಕ ವಿಕೋಪದಿಂದ ಆದಂಥ ಹಾನಿಯ ಬಗ್ಗೆ ನೀಡಿರುವ ಪರಿಹಾರ

ಶ್ರೀ ಬಸವರಾಜ ರಾಯರೆಡ್ಡಿ (ಯಲಬುರ್ಗ) : ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಕಳೆದ ಹಲವಾರು ವರ್ಷಗಳಿಂದ ಮಳೆ ಹಾನಿ ಮತ್ತು ಪ್ರವಾಹ, ಬರ ಇನ್ನಿತರ ನೈಸರ್ಗಿಕ ವಿಕೋಪದಿಂದ ಆಗಿರುವ ಹಾನಿಯ ಬಗ್ಗೆ ಸುದೀರ್ಘವಾಗಿ ಚರ್ಚೆ ಮಾಡಲು ಅರ್ಧ